## ಪ್ರೇಮವೆನಲು ಹಾಸ್ಯವೆ?

‘ಸುಮಿ ಹಂಗ ನೀನೂ ಚಾಷ್ಟಿ ಮಾಡ್ತಿಯೇನೋ, ಹುಡುಗಾ?’ ಎಂದು ಪ್ರೀತಂನ ಕಿವಿ ಹಿಂಡಿದಳು. ‘ನೂರಲ್ಲ, ಖರೆ ಅಂದ್ರ ಕನಿಷ್ಠ ಇನ್ನೂರ ಸರ್ತಿ ಓದಿನಿ’ ಎಂದು ದೊಡ್ಡಕ್ಕೆ ನಕ್ಕಳು. ಸುತ್ತಮುತ್ತಲಿನ ಭಿಡೆಯಿಲ್ಲದ ಅವಳ ನಗು ಪ್ರೀತಂಗೆ ಇಷ್ಟವಾಯಿತು. ನೇರವಾಗಿ ಹೃದಯದಿಂದ ಬಂದಂತೆ ಕೇಳಿಸುತ್ತಿತ್ತು. ಶೈಲತ್ತೆಯ ಚಂದದ ಬಗ್ಗೆ ಸುಮಿ ವರ್ಣಿಸಿದ್ದರಲ್ಲಿ ಏನೂ ಅತಿಶಯೋಕ್ತಿ ಇರಲಿಲ್ಲ. ಹುಸೇನನಿಗೆ ಖೂಬಸೂರತ್ ಬೇಗಂಳೇ ಸಿಕ್ಕಿರಬಹುದು. ಆದರೆ ಶೈಲತ್ತೆಯಂಥ ಸುಂದರಿಯನ್ನು, ದೈವಿಕ ಕಳೆಯಿರುವ ಪ್ರೇಮಿಯನ್ನು ಖಂಡಿತವಾಗಿಯೂ ಮಿಸ್ ಮಾಡಿಕೊಂಡ ಅನಿಸಿತು. ‘ಹೂಂನಪ್ಪಾ, ನಾನು ನಾಗ್ತಿಹಳ್ಳಿಯವರ ಬಿಗ್ ಫ್ಯಾನು. ಅವರ ‘ಪ್ರೇಮ ಕತೆಗಳು’ ಕಥಾಸಂಕಲನ ಐತಿ. ಅದು ಸದಾ ನನ್ನ ಬ್ಯಾಗಲ್ಲೇ ಇರತೈತಿ. ಈಗ್ಲೂ ಐತಿ. ಅದ್ರಮ್ಯಾಲೆ ನಾಗತಿಹಳ್ಳಿ ಸರ್ ಆಟೋಗ್ರಾಫ್ ತಗೋಬೇಕು ಅಂದ್ಕೊಂಡೀನಿ’ ಅಂದಳು.

ಪ್ರೀತಂ ಎರಡು ದಿನದಿಂದ ಸರಿಯಾಗಿ ಏನನ್ನೂ ತಿಂದಿರಲಿಲ್ಲ. ದೋಸೆ ಬಂದೊಡನೆ ಮುರಿದು ತಿನ್ನತೊಡಗಿದ. ಶೈಲತ್ತೆ ಸುಮಿಯ ಬಗ್ಗೆ ಮೌನವಾಗಿದ್ದಳು. ಪರಿಸ್ಥಿತಿ ನೆಟ್ಟಗಿಲ್ಲ ಎನ್ನುವುದು ಪ್ರೀತಂನೂ ಗ್ರಹಿಸಿದ್ದ. ಅವಳು ಸುಮಿ ಬಗ್ಗೆ ಹೇಳಲಿ ಎಂದು ಕಾದ. ‘ಸುಮಿಯನ್ನು ಅಷ್ಟೊಂದು ಪ್ರೀತಿಸ್ತಿಯೇನೋ ಪುಟ್ಟಾ?’ ಅಂದಳು. ಅದಕ್ಕೆ ಉತ್ತರವೂ ಶೈಲತ್ತೆಗೆ ಗೊತ್ತಿದ್ದರಿಂದ ಅವನು ತಲೆ ಎತ್ತಲಿಲ್ಲ. ಇನ್ನೊಂದು ದೋಸೆಗೆ ಕೈ ಹಚ್ಚಿದ್ದ. ‘ಸುಮಿ ನನ್ನೊತೆ ಸಂಪರ್ಕವೇ ಇಲ್ಲದಂಗ್ ಮಾಡಿದಾರ ಖೋಡಿಗಳು’ ಎಂದಳು. ‘ಖರೆ ಹೇಳ್ಬೇಕಂದ್ರೆ ಆಕಿನ ಎಲ್ಲಿ ಇಟ್ಟಾರೋ, ಪಾಪದ ಹುಡುಗಿಗೆ ಏನ್ ಹಿಂಸೆ ಕೊಡಾಕ್ ಹತ್ತಾರೋ ಒಂದೂ ತಿಳಿವಲ್ಲು ನಂಗೆ. ನನ್ನಿಂದ ಎಲ್ಲ ಗಪಚುಪ್ ಆಗಿಟ್ಟಾರ. ನಾ ಹುಚ್ಚಿಯಾಗ್ಬಿಟ್ಟೆನಿ’ ಎಂದಳು. ಅವಳ ಕಣ್ಣುಗಳಲ್ಲಿ ನೀರಾಡಿತು. ಯಾರ ಮೇಲೆ ವಿಶ್ವಾಸವಿಟ್ಟು ಇಲ್ಲಿವರೆಗೂ ಬಂದಿದ್ದನೋ, ಅವಳೇ ಇಷ್ಟು ಅಧೀರಳಾಗಿರುವುದನ್ನು, ಅಸಹಾಯಕಳಾಗಿರುವುದನ್ನು ಪ್ರೀತಂ ಊಹಿಸಿರಲಿಲ್ಲ. ‘ಆದ್ರೆ ನಿನ್ನನ್ನು ಕಂಡ ಮೇಲೆ ನನಿಗೆ ಮತ್ತೆ ಧೈರ್ಯ ಬಂದೈತಿ. ಸುಮಿಗಾಗಿ ನೀನು ಗೊತ್ತು–ಗುರಿಯಿಲ್ಲದ ಅಪರಿಚಿತ ಊರಿಗೆ ಬಂದಿ ಅನ್ನೋದೇ ಈ ಪ್ರೀತಿ ಅಗಾಧವಾದದ್ದು ಎಂಬ ನನ್ನ ನಂಬಿಕೆಯನ್ನು ಇನ್ನಷ್ಟು ಗಟ್ಟಿ ಮಾಡ್ತು. ಕಡಲತೀರದ ಹುಡುಗನ ಪ್ರೇಮವೂ ಕಡಲಿನಷ್ಟೆ ಆಳ ಐತಿ. ಸುಮಿನ ಕಾರವಾರದಿಂದ ಕರೆದುಕೊಂಡ ಬಂದ ಬಗ್ಗೆ ನನ್ನ ಕರುಳಲ್ಲಿ ನೋವಿಟ್ಟುಕೊಂಡು ಅಡ್ಡಾಡ್ತಿದ್ದೆ. ಆದರೆ ನಿನ್ನ ಕಂಡಾಗಿಂದ ಮನಸು ಚೂರು ತಂಪಾಯ್ತು ಮಗನೆ. ಆದ್ರೆ ನಾವ್ ದುಡುಕುವಾಂಗಿಲ್ಲ. ಕಟುಕರು ಅವರು. ಭಾಳಾ ಹುಶಾರಾಗಿರಬೇಕು. ಫಂಕ್ಷನ್ ಮುಗಿಲಿ. ಇಬ್ರೂ ಕೂತು ಯೋಚಿಸೋಣ’ ಅಂದು ಬಿಲ್ ಪೇ ಮಾಡಲು ಎದ್ದು ಕೌಂಟರಿಗೆ ಹೋದಳು. ಪ್ರೀತಂ ಅವಳನ್ನು ಹಿಂಬಾಲಿಸಿದರೂ, ಶೈಲತ್ತೆ ದಾರಿ ತೋರುವಳು ಎಂದು ನಿರೀಕ್ಷಿಸಿ ಬಂದಿದ್ದ ಅವನಿಗೆ ಅದರ ಮಿತಿಯ ಅರಿವಾಗತೊಡಗಿತು. ಆತನಿಗೆ ಮತ್ತೆ ಏಕಾಂಗಿಯಂತೆ ಅನಿಸಿತು. ವೇದಿಕೆ ಮೇಲೆ ಕಾರ್ಯಕ್ರಮ ನಡೀತಿರುವಾಗಲೇ ಅವನ ಮೀನು ತಿಂದ ಮಸ್ತಿಷ್ಕವು ಇತರ ಸಾಧ್ಯತೆಗಳನ್ನು

